# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 693 |
| ಸದಸ್ಯರ ಹೆಸರು | : ಶ್ರೀ ಮಂಜುನಾಥ ಭಂಡಾರಿ |
| ಉತ್ತರಿಸುವ ದಿನಾಂಕ | : 22.02.2023 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು. |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಂದಾಯ ಭೂಮಿಯಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳೆಷ್ಟು; ಇವುಗಳಲ್ಲಿ ಭೂಕಂದಾಯ ಕಾಯ್ದೆ 1964ರ ಕಲಂ 96(4) ಅನ್ವಯ ಸಕ್ರಮಾತಿಗಾಗಿ ಅರ್ಜಿ ಸಲ್ಲಿಸಲ್ಪಟ್ಟ ಪ್ರಕರಣಗಳೆಷ್ಟು; ಎಷ್ಟು ಕಟ್ಟಡಗಳನ್ನು ಮುಟ್ಟುಗೋಲು/ ತೆರವುಗೊಳಿಸಲು ಕ್ರಮ ವಹಿಸಲಾಗಿದೆ; ಎಷ್ಟು ಪ್ರಕರಣಗಳನ್ನು ಕ್ರಮಬದ್ಧಗೊಳಿಸಿ ಆದೇಶಿಸಲಾಗಿದೆ; (ವಿವರ ನೀಡುವುದು) | ಜಿಲ್ಲಾಧಿಕಾರಿಗಳು ಬೆಂಗಳೂರು ನಗರ, ದಾವಣಗೆರೆ , ಬೆಂಗಳೂರು ದಕ್ಷಿಣ, ಚಿಕ್ಕಮಗಳೂರು, ಹಾಸನ ಕೊಡಗು, ಬಳ್ಳಾರಿ ಜಿಲ್ಲೆಗಳಲ್ಲಿ ಅನಧೀಕೃತವಾಗಿ ನಿರ್ಮಿಸಿರುವ ಕಟ್ಟಡಗಳ ಮಾಹಿತಿಗಳನ್ನು ಸಲ್ಲಿಸಿರುತ್ತಾರೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಪ್ರಕರಣಗಳು ಇರುವುದಿಲ್ಲ. |
| ಆ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಳೆಯ ಮನೆ/ಕಟ್ಟಡಗಳು/ಗದ್ದೆ/ತೋಟದ ನಡುವೆ ಭೂ ಪರಿವರ್ತನೆ ನಿಯಮ ಜಾರಿಯಾಗುವ ಮೊದಲಿನಿಂದ ಕೃಷಿ ಜಾಗದಲ್ಲಿದ್ದು ಪ್ರಸ್ತುತ ಆಯಾಯ ಸ್ಥಳೀಯ ಸಂಸ್ಥೆಯ ಮೂಲಕ ನಿಯಮಾನುಸಾರ ಖಾತೆ ಬದಲಾವಣೆ ಮಾಡಲು ಭೂ ಪರಿವರ್ತನೆ ಅಗತ್ಯವಿದ್ದು, ಭೂ ಪರಿವರ್ತನೆ ಮಾಡಲು ಅವಕಾಶವಿದೆಯೇ; ಸದರಿ ಪ್ರಕರಣವನ್ನು ಪರಿಗಣಿತ ಭೂ ಪರಿವರ್ತನೆಯನ್ನಾಗಿ ಘೋಷಿಸಲು ಸರಕಾರ ಚಿಂತಿಸಿದೆಯೇ; ಈ ಸಮಸ್ಯೆ ಪರಿಹರಿಸಲು ಸರಕಾರದ ಕ್ರಮಗಳೇನು; (ವಿವರ ನೀಡುವುದು) | ಉಡುಪಿ ಜಿಲ್ಲೆಯಲ್ಲಿ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ 1981ರ ಕಲಂ 95 (6ಎ) ರಂತ ದಕ್ಷಿಣ ಕನ್ನಡ ( ಹಾಲಿ ಉಡುಪಿ ಜಿಲ್ಲೆ, ಕೊಡಗು ಜಿಲ್ಲೆ ಹಾಗೂ ಮೈಸೂರು, ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ಭೂ ಕಂದಾಯ ತಿದ್ದುಪಡಿ, ಅಧಿನಿಯಮ 1981 ರ ಪ್ರಾರಂಭಕ್ಕೆ 'ಮುಂಚೆ (ದಿನಾಂಕ: 02-10-1980) ರಿಂದ ಕೃಷಿ ಉದ್ದೇಶಕ್ಕೆ ಕರನಿರ್ಧಾರಣೆ ಮಾಡಲಾದ ಮತ್ತು ಹಿಡುವಳಿ ಹೊಂದಿರುವ ಯಾವುದೇ ಜಮೀನನ್ನು ಅದರ ಬಳಕೆಯ ಪಲ್ಲಟ ಮಾಡಿದರೆ ಅಥವಾ ಇನ್ನ್ಯಾವುದೋ ಉದ್ದೇಶಕ್ಕೆ ಬಳಸಿದರೆ, ಹಾಗೆ ಬಳಸಲಾದ ಜಮೀನು (ಹೊಲಮನೆ "ಇಲ್ಲದ), ಅದರಲ್ಲಿನ `ಯಾವುದೇ ಕಟ್ಟಡಕ್ಕೆ ಲಗತ್ತಾದ 'ಯಾವುದೇ ಭೂಮಿಯು ಅಂತಹ ಕಟ್ಟಡ ನಿರ್ಮಿತ ಪ್ರದೇಶದ ಮೂರು ಪಟ್ಟು ಹೆಚ್ಚಾಗಿರದಿದ್ದರೆ, ಅವು ಆ ದಿನಾಂಕದಿಂದ ಕೃಷಿ ಉದ್ದೇಶವಲ್ಲದ ಉದ್ದೇಶಕ್ಕಾಗಿ ಅನುಮತಿಸಲಾದವು ಎಂದು ಭಾವಿಸತಕ್ಕದ್ದು ಎಂದು ವಿವರಿಸಿರುವುದರಿಂದ ಪರಿಭಾವಿತ ಭೂ ಪರಿವರ್ತಿತ ಜಮೀನಂದು ಪರಿಗಣಿಸಬೇಕಿರುತ್ತದೆ ಹಾಗೂ ದಿನಾಂಕ: 02-10-1980 ರ ನಂತರದಲ್ಲಿ ಅಂತಹ ಜಮೀನುಗಳಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95 ರಂತೆ ಭೂ ಪರಿವರ್ತನೆಗೆ ಅವಕಾಶ ಇರುವುದಾಗಿದೆ.<br>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(6ಎ) ರಡಿ ಬೇಸಾಯದ ಬಳಕೆಗಾಗಿ ತೆರಿಗೆ ನಿರ್ಧರಿಸಲಾದ |

| | | |
|---|---|---|
| | | ಅಥವಾ ಹಿಡುವಳಿ ಹೊಂದಿರುವ ಭೂಮಿಯನ್ನು ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ 1981 ರ ಪ್ರಾರಂಭದ ದಿನಾಂಕಕ್ಕೆ ಮೊದಲು ಯಾವುದೇ ಇತರ ಉದ್ದೇಶಗಳಿಗಾಗಿ ತಿರುಗಿಸಿಕೊಂಡಿರುವ ಅಥವಾ ಉಪಯೋಗಿಸಿ ಕೊಂಡಿರುವ ಸಂದರ್ಭದಲ್ಲಿ ಅಂಥ ಕಟ್ಟಡ ನಿರ್ಮಾಣ ಪ್ರದೇಶದ ಮೂರು ಪಟ್ಟುಗಳಿಗಿಂತ ಮೀರದಂಥ ಅದರಲ್ಲಿ ಯಾವುದೇ ಕಟ್ಟಡಕ್ಕೆ ಸೇರಿಕೊಂಡ ಭೂಮಿಯು (ವ್ಯವಸಾಯ ಕ್ಷೇತ್ರದ ಮನೆಯನ್ನಲ್ಲದೇ) ಸೇರಿದಂತೆ ಹಾಗೇ ಉಪಯೋಗಿಸಿದ ಉದ್ದೇಶಗಳಿಗಾಗಿಯಲ್ಲದೇ ಉಪಯೋಗಿಸಲು ಭಾವಿಸತಕ್ಕದ್ದು ಕ್ರಮವಹಿಸಲಾಗುತ್ತಿದೆ. ಭೂಮಿಯೂ ವ್ಯವಸಾಯದ ಅಂಥ ದಿನಾಂಕದಿಂದ ಅನುಮತಿಸಲಾಗಿದೆ ಎಂದು ಎಂದಿದ್ದು. ಅದರಂತೆ ಕ್ರಮವಹಿಸಲಾಗುತ್ತಿದೆ. |
| ಇ) | ಫಾರ್ಮಹೌಸ್ ಗಳ ನಿರ್ಮಾಣ ನಿಯಮಗಳೇನು; ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 95 ರಂತೆ ನಿರ್ಮಾಣವಾಗಿರುವ ಫಾರ್ಮಹೌಸ ಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಅಧಿಕೃತವಾಗಿ ಫಾರ್ಮಹೌಸ್ ಗಳೆಂದು ಪಹಣಿಯಲ್ಲಿ ದಾಖಲಿಸಿರುವ ಪ್ರಕರಣಗಳನ್ನು ದಾಖಲಿಸಲು ಬಾಕಿಯಿರುವ ಪ್ರಕರಣಗಳಷ್ಟು ಫಾರ್ಮಹೌಸ್ ಕಟ್ಟಡಗಳೆಂದು ಘೋಷಿಸಲು ಸಾಧ್ಯವಾಗದ ಕಟ್ಟಡಗಳೆಷ್ಟು; (ಕಾರಣ ಸಹಿ ವಿವರ ನೀಡುವುದು) | ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ. 11 ಎಲ್‌ಜಿಪಿ 2018 ದಿ: 29-01-2018 ರಂತೆ<br>1. ಫಾರ್ಮ್ ಹೌಸ್‌ನ್ನು ಕೃಷಿಕರ ಹಾಗೂ ಅವರ ಕುಟುಂಬದ ವಾಸ್ತವ್ಯಕ್ಕಾಗಿ ಹಾಗೂ ಕೃಷಿ ಸಲಕರಣೆಗಳನ್ನು ಇಟ್ಟುಕೊಳ್ಳುವ ಸಲುವಾಗಿ ಮಾತ್ರ ಉಪಯೋಗಿಸತಕ್ಕದ್ದಾಗಿರುತ್ತದೆ. ಮುಂದುವರೆದು ಸದ್ರಿ ಫಾರ್ಮ್ ಹೌಸ್‌ನ್ನು ಬಾಡಿಗೆ ನೀಡುವುದಾಗಲೀ ಹಾಗೂ ಇತರ ವಾಣಿಜ್ಯ ಉದ್ದೇಶಕ್ಕಾಗಲೀ ಬಳಸಲು ಅವಕಾಶವಿರುವುದಿಲ್ಲ.<br>2. ಫಾರ್ಮ್ ಹೌಸ್ ನಿರ್ಮಾಣವು ಸಂದರ್ಭೋಚಿತ ವಾಗಿದ್ದು ಉತ್ತಮ ಸಾಗುವಳಿಗಾಗಿ ಅಥವಾ ವ್ಯವಸಾಯ ಉಪಯೋಗಕ್ಕಾಗಿದ್ದು, ತನ್ನದೇ ಆದ ಸ್ವತಂತ್ರ ಅಸ್ತಿತ್ವವನ್ನು ಹೊಂದಿರದ ಕಾರಣ ಮತ್ತು ಯಾವುದೇ ಪರಿವರ್ತನೆಯಾಗಿರದ ಕಾರಣ ಈ ನಿರ್ಮಾಣಕ್ಕೆ ಪ್ರತ್ಯೇಕವಾದ ಗ್ರಾಮ ಪಂಚಾಯತ್ ಮುನ್ಸಿಪಾಲಿಟಿಯವರ ಆಸ್ತಿ ಸಂಖ್ಯೆಯನ್ನು ರಚಿಸತಕ್ಕದ್ದಲ್ಲ.<br>3. ಫಾರ್ಮ್ ಹೌಸ್ ಭಾಗದ ಆಸ್ತಿಯನ್ನು ಯಾವುದೇ ವ್ಯವಹಾರ ಅಥವಾ ಮಾರಾಟ ಮಾಡಬೇಕಾದ ಸಂದರ್ಭದಲ್ಲಿ ಅಥವಾ ಗ್ರಾಮ ಪಂಚಾಯಿತಿ/ ಮುನ್ಸಿಪಲ್ ಆಸ್ತಿ ಸಂಖ್ಯೆಯನ್ನು ನೀಡಬೇಕಾಗಿದ್ದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ನಿಯಮ 25ರಡಿ ಭೂ ಪರಿವರ್ತನೆಯು ಕಡ್ಡಾಯವಾಗಿರುತ್ತದೆ.<br>4. ಫಾರಂ ಹೌಸ್, ಬಾವಿ ಅಥವಾ ತೊಟ್ಟಿ ನಿರ್ಮಾಣವು ಇತರೆ ಸಂಬಂಧಿಸಿದ ಕಾಯ್ದೆ ನಿಯಮಗಳಿಗೆ ಒಳಪಟ್ಟಿರುತ್ತದೆ.<br>ಭೂ ಕಂದಾಯ ಕಾಯ್ದೆ 1964ರ ಕಲಂ 95ರಂತೆ ನಿರ್ಮಾಣವಾಗಿರುವ ಫಾರ್ಮ್ ಹೌಸ್ ವಿವರ ಈ ಕೆಳಗಿನಂತಿದೆ. |

| ತಾಲ್ಲೂಕು | ನಿರ್ಮಾಣ ವಾಗಿರುವ ಫಾರ್ಮ್ ಹೌಸ್ ಗಳ ಸಂಖ್ಯೆ | ಫಾರ್ಮ್ ಹೌಸ್ ಎಂದು ಪಹಣಿ ಯಲ್ಲಿ ದಾಖಲಿಸಿ ರುವ ಸಂಖ್ಯೆ | ಪಹಣಿ ದಾಖಲಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ. |
|---|---|---|---|
| ಉಡುಪಿ | 12 | 0 | 12 |
| ಕುಂದಾಪುರ | 15 | 0 | 15 |
| ಕಾರ್ಕಳ | 26 | 26 | 0 |
| ಕಾಪು | 3 | 3 | 0 |
| ಬೈಂದೂರು | 12 | 0 | 12 |
| ಬ್ರಹ್ಮಾವರ | 4 | 3 | 0 |
| ಹೆಬ್ರಿ | 3 | 0 | 3 |
| ಒಟ್ಟು | 75 | 32 | 42 |

ಫಾರ್ಮ್ ಹೌಸ್ ಕಟ್ಟಡಗಳೆಂದು ಘೋಷಿಸಲು ಸಾಧ್ಯವಾಗದ ಕಟ್ಟಡಗಳು ಇರುವುದಿಲ್ಲ. ಹಾಗೂ ಮೇಲಿನ ವಿವರದ ಫಾರ್ಮ್ ಹೌಸ್‌ಗಳ ಪೈಕಿ ಪಹಣಿಯಲ್ಲಿ `ವಿವರ ದಾಖಲಿಸದ ಇರುವುದಕ್ಕೆ ಪಹಣಿಯಲ್ಲಿ ದಾಖಲಿಸಲು ಕ್ರಮವಹಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95(1) ರ ಪರಂತುಕದಲ್ಲಿ ಕೃಷಿಕರು ಕೃಷಿ ಭೂಮಿಯ ಒಟ್ಟು ವಿಸ್ತೀರ್ಣದ ಶೇ. 10 ರಷ್ಟು ಮೀರದ ಜಾಗದಲ್ಲಿ ಫಾರ್ಮ್ ಹೌಸ್ ಕಟ್ಟಿಕೊಳ್ಳಬಹುದಾಗಿದ್ದು, ಸದರಿ ಫಾರ್ಮ್ ಹೌಸ್ ನ್ನು ಕೃಷಿಕರ ಹಾಗೂ ಅವರ ಕುಟುಂಬದ ವಾಸ್ತವ್ಯಕ್ಕಾಗಿ ಹಾಗೂ ಕೃಷಿ ಸಲಕರಣೆಗಳನ್ನು ಇಟ್ಟುಕೊಳ್ಳುವ ಸಲುವಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95 ರಂತೆ ನಿರ್ಮಾಣವಾಗಿರುವ ಫಾರ್ಮ್ ಹೌಸ್‌ಗಳ ಅಂದಾಜು ಸಂಖ್ಯೆ 143 ಆಗಿರುತ್ತದೆ.

ಇನ್ನುಳಿದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 11 ಎಲ್ ಜಿಪಿ 2018 ದಿ. 29/01/2018 ರಂತೆ ಕ್ರಮವಹಿಸಲಾಗುತ್ತಿದೆ.

| | | |
|---|---|---|
| ಈ) | ಕೃಷಿ ಜಮೀನಿನಲ್ಲಿ ನಿರ್ಮಾಣ ಮಾಡುವ ವಾಣಿಜ್ಯ ರೂಪದ ಕೋಳಿ ಸಾಕಾಣಿಕೆ. ಹಂದಿ ಸಾಕಾಣಿಕೆ. ಕುರಿ ಸಾಕಾಣಿಕೆ. ಗೋಶಾಲೆ/ಡೈರಿ ಫಾರ್ಮ್ಸ್ ಕಾಫಿ ಪಲ್ಪರ್, ದೂರವಾಣಿ ಟವರ್. ಇಂಟರ್‌ಲೋಕ್/ಕಾಂಕ್ರೀಟ್/ ಡಾಮಾರು ಮಿಕ್ಸಿಂಗ್ ಘಟಕ, ಗ್ರಾಮೀಣ ಎಲ್.ಪಿ.ಜಿ. ಗೋಡೌನ್. ಇನ್ನಿತರ ಕೃಷಿಯೇತರ ವ್ಯವಹಾರ ನಡೆಸುವ ಕಟ್ಟಡಗಳ ನಿರ್ಮಾಣಕ್ಕೆ ಭೂ ಪರಿವರ್ತನೆಯ ಅವಶ್ಯಕತೆಯಿದೆಯೇ; ಭೂ ಪರಿವರ್ತನೆ ಇರುವ ನಿಯಮಗಳೇನು? (ವಿವರ ನೀಡುವುದು) | ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಕರ್ನಾಟಕ ಸರಕಾರದ ಸುತ್ತೋಲೆ ಸಂಖ್ಯೆ: ಆರ್ ಡಿ. 28 ಎಲ್ ಜಿ ಪಿ 2022 .ದಿನಾಂಕ 07-11-2022 ರಂತೆ ಕೃಷಿ ಜಮೀನಿನಲ್ಲಿ ನಿರ್ಮಾಣ ಮಾಡುವ.. ಕೋಳಿ ಸಾಕಾಣಿಕೆ, ಕಟ್ಟಡಕ್ಕೆ ಕೃಷಿ ಚಟುವಟಿಕೆ ಎಂದು ಹಿಂಬರಹ ನೀಡಲಾಗುತ್ತದೆ. ಹಂದಿ ಸಾಕಣೆ, ಕುರಿ ಸಾಕಾಣಿಕೆ, ಗೋಶಾಲೆ/ಡೈರಿ ಫಾರ್ಮ್ಸ್ ಕುರಿತಂತೆ ಸರಕಾರದ ಹಂತದಲ್ಲಿ ಕ್ರಮವಾಗಬೇಕಾಗಿರುತ್ತದೆ. ಕಾಫಿ, ಪಲ್ಪರ್ 'ದೂರವಾಣಿ' ಟವರ್, ಇಂಟರ್ ಲೋಕ್/ಕಾಂಕ್ರಿಟ್ / ಡಾಮಾರು ಮಿಕ್ಸಿಂಗ್ ಘಟಕ, ಗ್ರಾಮೀಣ: ಎಲ್.ಪಿ.ಜಿ ಗೋಡೌನ್, 'ಇನ್ನಿತರ ಕೃಷಿಯೇತರ ವ್ಯವಹಾರ ನಡೆಸುವ ಘಟಕಗಳಿಗೆ: ಭೂಪರಿವರ್ತನ ಅವಶ್ಯಕವಾಗಿರುತ್ತದೆಂದು ವರದಿಸಿರುತ್ತಾರೆ |

| | | |
|---|---|---|
| | | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ 28 ಎಲ್ ಜಿ ಪಿ 2022 ದಿನಾಂಕ: 07.11.2022 ರಂತೆ ಕೋಳಿ ಸಾಕಾಣಿಕೆಗಾಗಿ ಉಪಯೋಗಿಸುತ್ತಿರುವ ಕೃಷಿ ಭೂಮಿಯನ್ನು ಭೂ ಪರಿವರ್ತನೆಯಿಂದ ವಿನಾಯಿತಿ ನೀಡಿ ಸರ್ಕಾರವು ಆದೇಶ ಹೊರಡಿಸಲಾಗಿದೆ. |

ಸಂಖ್ಯೆ: ಆರ್‌ಡಿ 43 ಎಲ್‌ಜಿಕ್ಯೂ 2023

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

# ಅನುಬಂಧ.

| ಕ್ರ.ಸಂ. | ಜಿಲ್ಲೆ | ಕಂದಾಯ ಭೂಮಿಯಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳ ಸಂಖ್ಯೆ. | ಕಲಂ96(4) ರಡಿ ಸಕ್ರಮಾತಿಗಾಗಿ ಕೋರಿರುವ ಪ್ರಕರಣಗಳು. | ಮುಟ್ಟುಗೋಲು/ ತೆರವುಗೊಳಿಸಲಾದ ಕಟ್ಟಡಗಳು | ದಂಡಶುಲ್ಕ ವಿಧಿಸಿ ಭೂಪರಿವರ್ತಿಸಿ ಆದೇಶ ಹೊರಡಿಸಿರುವ ಪ್ರಕರಣಗಳು |
|---|---|---|---|---|---|
| 1 | ಬೆಂಗಳೂರು ನಗರ, | 6077 | 6077 | 44 | 6077 |
| 2 | ದಾವಣಗೆರೆ, | 13 | 13 | 0 | 13 |
| 3 | ಬೆಂಗಳೂರು ದಕ್ಷಿಣ, | 2257 | 2257 | | 2257 |
| 4 | ಚಿಕ್ಕಮಗಳೂರು, | 229 | 229 | 0 | 226 |
| 5 | ಹಾಸನ | 455 | 455 | 0 | 455 |
| 6 | ಕೊಡಗು, | 6943 | 6943 | 0 | 6943 |
| 7 | ಬಳ್ಳಾರಿ | 216 | 216 | 0 | 216 |